# ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಮಾನವಿ.

## CC No. 1383/2023

CW- PW-2

| | | |
|---|---|---|
| ಸಾಕ್ಷಿದಾರರ ಹೆಸರು | : | ಗೌಸ ಮೊದೀನ |
| ತಂದೆ ಹೆಸರು | : | ಭಾಷಾ ಸಾಬ ಸೆಕರೇಟರಿ |
| ವಯಸ್ಸು | : | 37 ವರ್ಷ |
| ಉದ್ಯೋಗ | : | ಒಕ್ಕಲುತನ |
| ವಾಸ ಸ್ಥಳ | : | ಅರೋಲಿ |

ದಿನಾಂಕ 02.06.2026 ರಂದು ಸತ್ಯ ಪ್ರತಿಜ್ಞಾವಿಧಿಯನ್ನು ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃ**

ಚಾಸಾ-1 ಮತ್ತು 3 ರವರು ನಮ್ಮ ಊರಿನವರು. ನಾನು 3 ವರ್ಷಗಳ ಹಿಂದೆ ಚಾಸಾ-1 ರವರ ಹೊಲದ ಪಕ್ಕ ನಮ್ಮ ಹೊಲ ಇದ್ದು ಹೋದಾಗ ಜಗಳವಾದ ವಿಷಯ ಪೊಲೀಸರು ಬಂದಿದ್ದು ನಾವು ಜಗಳ ಬಿಡಿಸಿರುತ್ತೇವೆ, ಪೊಲೀಸರು ಅಲ್ಲಿ ಬಂದು ಎನಕ್ವಯರಿ ಮಾಡಿರುತ್ತಾರ, ಸದರಿ ದಾಖಲೆ ತೋರಿಸಲಾಗಿ ಅದು ಸ್ಥಳ ಪಂಚನಾಮೆಯಾಗಿದ್ದು, ಅದನ್ನು ಈಗಾಗಲೇ ನಿಪಿ-2 ಎಂದು ಗುರುತಿಸಲಾಗಿದ್ದು, ಸಾಕ್ಷಿ ಹೆಬ್ಬಟ್ಟಿನ ಸಹಿ ಇರುವುದರಿಂದ ಅದನ್ನು ನಿಷಾನೆಗೊಳಿಸಿರುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಸ.ಸ.ಅ. ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಬೇಕೆಂದು ಕೋರಿರುತ್ತಾರೆ. ಅಂತೆಯೇ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ ಮಾನ್ಯ ಸ.ಸ.ಅ. ರವರಿಂದಃ**

ದಿನಾಂಕ 07-07-2023 ರಂದು ಚಾಸಾ-1 ರವರು ತೋರಿಸಿದ ಘಟನಾ ಸ್ಥಳದಲ್ಲಿ ನನ್ನ ಹಾಗಾ ಚಸಾ-3 ರವರ ಸಮಕ್ಷಮ ಬೆ. 10.00 ರಿಂದ 11.00 ಗಂಟೆವರೆಗೆ ಪಂಚನಾಮೆ ಮಾಡಿ ಮತ್ತು ನಕಾಶೆ ತಯಾರು ಮಾಡಿರುತ್ತಾರೆ ಎಂದರೆ ಸರಿ .

**ಪಾಟೀ ಸವಾಲುಃ ಆರೋಪಿ ಪರ ಶ್ರೀ. ಎಂ.ಎಂ. ವಕೀಲರಿಂದಃ**

ನನಗೆ ಪಂಚರಾಗಿ ಬರುಲು ನನಗೆ ನೋಟೀಸ ನೀಡಿರುವುದಿಲ್ಲ. ನನಗೆ ಯಾವ ದಿನಾಂಕದಂದು ಪಂಚನಾಮೆ ಮಾಡಿದ್ದಾರೆಂದು , ಎಷ್ಟು ಗಂಟಗೆ ಪಂಚನಾಮೆ ಮಾಡಿದರು ಎಂದು ಹೇಳಲು ಬರುವುದಿಲ್ಲ ಅದರ ಚಲಬಂದಿ ಕೂಡ ಹೇಳಲು ಬರುವುದಿಲ್ಲ . ಪೊಲಿಸೀರು ಸಹಿ ಮಾಡು ಅಂದಿದ್ದಕ್ಕೆ ಸಹಿ ಮಾಡಿದ್ದೇನೆ ಎಂದರೆ ಸರಿ . ನಿಪಿ-2 ರಲ್ಲಿ ಬರೆದ ಳಿಷಯ ಗೊತ್ತಿಲ್ಲ ಎಂದರೆ ಸರಿ, ಆರೋಪಿ ಮತುತ ಚಾಸಾ-1 ರವರಿಗಾೆ ವೈಶಮ್ಯ ಇರುವುದರಿಂದ ಚಾಸಾ-1 ರವರ ಮಾಡತು ಕೇಳಿ ಅವರಿಗೆ ಅನುಕೂಲವಾಗುವ ರೀತಿಯಲ್ಲಿ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ನನ್ನ ಉಕ್ತಲೇಖದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿರುತ್ತದೆ.)

ಓ.ಹೇ.ಕೆ.ಸರಿ ಇದೆ

ಪ್ರ.ದ.ನ್ಯಾ.ದಂ.ಗಳು, ಮಾನ್ವಿ